# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್. ರಸ್ತೆ, ತುಮಕೂರು – 572 103

ಸಂಖ್ಯೆ: ತುವಿ:ಶೈ.ವಿ:2019–20:| 355 12 ದಿನಾಂಕ:10.12.2019

## : ಸುತ್ತೋಲೆ :

ವಿಷಯ: ಸ್ನಾತಕ ಪದವಿ ಕೋರ್ಸ್‌ಗಳ ಸಿ.ಬಿ.ಸಿ.ಎಸ್. ವಿನಿಯಮದಲ್ಲಿ ಬದಲಾವಣೆ ಮಾಡುವ ಬಗ್ಗೆ ಅಭಿಪ್ರಾಯ ನೀಡುವ ಬಗ್ಗೆ.

ಉಲ್ಲೇಖ:
1. ಸ್ನಾತಕ ಪದವಿ ಕೋರ್ಸ್‌ಗಳಿಗೆ Choice Based Credit System ಅನ್ನು ಅನುಷ್ಠಾನಗೊಳಿಸುವ ಸಂಬಂಧವಾಗಿ ರಚಿಸಲಾಗಿರುವ ಸಮಿತಿಯ ದಿನಾಂಕ 06.12.2019ರ ಸಭೆಯ ನಡಾವಳಿ.
2. ಮಾನ್ಯ ಕುಲಪತಿಗಳ ಅನುಮೋದನೆ [ಕಂಡಿಕೆ (73)] ದಿನಾಂಕ 09.12.2019

* * * * *

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ಸಭೆಯ ನಡಾವಳಿಯನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಲಾಗಿದೆ. ಸ್ನಾತಕ ಪದವಿಗಳ ಸಿ.ಬಿ.ಸಿ.ಎಸ್. ವಿನಿಯಮದಲ್ಲಿ ಕೆಲವು ಮಾರ್ಪಾಡು ಮಾಡುವಂತೆ ಮನವಿಗಳು ಸ್ವೀಕೃತವಾಗಿದ್ದು, ಈ ಸಂಬಂಧ ಉಲ್ಲೇಖ (1)ರ ಸಮಿತಿಯು ಈ ಕೆಳಗೆ ತಿಳಿಸಿರುವ ಎರಡು ವಿಷಯಗಳ ಬಗ್ಗೆ ಎಲ್ಲಾ ಸಂಯೋಜಿತ/ ಘಟಕ ಕಾಲೇಜುಗಳ ಪ್ರಾಂಶುಪಾಲರುಗಳ ಅಭಿಪ್ರಾಯ ಪಡೆಯುವಂತೆ ಶಿಫಾರಸ್ಸು ಮಾಡಿರುತ್ತಾರೆ.

1. ಕಡ್ಡಾಯ ಪತ್ರಿಕೆಗಳ ಕೋರ್ಸ್ ಮ್ಯಾಟ್ರಿಕ್ಸ್ ಹಾಗೂ ಸ್ಟ್ರಕ್ಚರ್‌ಗಳನ್ನು ಈ ಕೆಳಕಂಡಂತೆ ಮಾರ್ಪಾಡು ಮಾಡುವ ಬಗ್ಗೆ

| Semester | B.Sc. and B.C.A | B.A. and B.S.W. | B.Com. and B.B.M. |
|---|---|---|---|
| First | Computer Fundamentals | Environmental Science | Indian Constitution |
| Second | Environmental Science | Indian Constitution | Computer Fundamentals |
| Third | Indian Constitution | Computer Fundamentals | Environmental Science |
| Fourth | Open Elective | Open Elective | Open Elective |

ಈ ಬಗ್ಗೆ ಈಗಾಗಲೇ ಎಲ್ಲಾ ಕಾಲೇಜುಗಳಿಗೆ ಸುತ್ತೋಲೆ ಹೊರಡಿಸಿ, ಪ್ರಾಂಶುಪಾಲರುಗಳ ಅಭಿಪ್ರಾಯ ಕೋರಲಾಗಿತ್ತು. ಆದರೆ ಕೆಲವೇ ಕೆಲವು ಕಾಲೇಜುಗಳು ಮಾತ್ರ ಅಭಿಪ್ರಾಯ ನೀಡಿರುತ್ತಾರೆ. ಆದ್ದರಿಂದ ಮೇಲೆ ತಿಳಿಸಿರುವ ಕೋಷ್ಟಕದಲ್ಲಿ ನಮೂದಿಸಿರುವಂತೆ ಕಡ್ಡಾಯ ಪತ್ರಿಕೆಗಳ ಕೋರ್ಸ್ ಮ್ಯಾಟ್ರಿಕ್ಸ್ ಹಾಗೂ ಸ್ಟ್ರಕ್ಚರ್‌ಗಳನ್ನು ಮಾರ್ಪಾಡು ಮಾಡುವ ಬಗ್ಗೆ ಎಲ್ಲಾ ಪ್ರಾಂಶುಪಾಲರುಗಳು ಕಡ್ಡಾಯವಾಗಿ ಅಭಿಪ್ರಾಯ ನೀಡುವಂತೆ ತಿಳಿಸಲಾಗಿದೆ.

2. ಸ್ನಾತಕ ಸಿ.ಬಿ.ಸಿ.ಎಸ್. ವಿನಿಯಮದಲ್ಲಿ ಕಡ್ಡಾಯ ಹಾಗೂ ಮುಕ್ತ ಆಯ್ಕೆ ಪತ್ರಿಕೆಗಳ ಪ್ರಸ್ತುತವಿರುವ ಎರಡು ಗಂಟೆಗಳ ಕಾರ್ಯಭಾರವನ್ನು ನಾಲ್ಕು ಗಂಟೆಗಳಿಗೆ ನಿಗದಿಪಡಿಸುವ ಬಗ್ಗೆ ಎಲ್ಲಾ ಪ್ರಾಂಶುಪಾಲರುಗಳು ಅಭಿಪ್ರಾಯ ನೀಡುವಂತೆ ತಿಳಿಸಲಾಗಿದೆ.

ಆದ್ದರಿಂದ ಮೇಲ್ಕಂಡ ಎರಡು ವಿಷಯಗಳಲ್ಲಿ ತಿಳಿಸಿರುವ ಬದಲಾವಣೆಗಳನ್ನು ಮಾಡುವುದರ ಬಗ್ಗೆ ಎಲ್ಲಾ ಪ್ರಾಂಶುಪಾಲರುಗಳು ತಮ್ಮ ಸ್ಪಷ್ಟ ಅಭಿಪ್ರಾಯವನ್ನು ದಿನಾಂಕ 20.12.2019 ರೊಳಗೆ ಕಡ್ಡಾಯವಾಗಿ ಲಿಖಿತ ರೂಪದಲ್ಲಿ ತಿಳಿಸಬೇಕೆಂದು ಈ ಮೂಲಕ ಸೂಚಿಸಲಾಗಿದೆ.

11/12

ಕುಲಸಚಿವರು

ಕುಲಸಚಿವರು
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಗೆ,

ಪ್ರಾಂಶುಪಾಲರು, ಘಟಕ/ಸಂಯೋಜಿತ ಸ್ನಾತಕ ಪದವಿ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ ತುಮಕೂರು.

ಪ್ರತಿಗಳು:
1. ಮಾನ್ಯ ಕುಲಸಚಿವರು(ಮೌಲ್ಯಮಾಪನ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಪ್ರೊ. ಬಿ.ಟಿ. ಸಂಪತ್‌ಕುಮಾರ್, ಅಧ್ಯಕ್ಷರು, ಸ್ನಾತಕ ಪದವಿ ಕೋರ್ಸ್‌ಗಳಿಗೆ CBCS ಅನ್ನು ಅನುಷ್ಠಾನಗೊಳಿಸುವ ಸಂಬಂಧವಾಗಿ ರಚಿಸಲಾಗಿರುವ ಸಮಿತಿ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
3. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು – ಇಂದೇ ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಪ್ರಕಟಿಸಲು ಹಾಗೂ ಎಲ್ಲಾ ಕಾಲೇಜುಗಳಿಗೆ ಮಿಂಚಂಚೆ ಮೂಲಕ ಕಳುಹಿಸಲು ಕ್ರಮಕೈಗೊಳ್ಳುವುದು.
4. ಮಾನ್ಯ ಕುಲಪತಿಗಳ ಆಪ್ತಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
5. ಕಚೇರಿ ಪ್ರತಿ.

# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್. ರಸ್ತೆ, ತುಮಕೂರು-572 103


## ನಡಾವಳಿ

ಸ್ನಾತಕ ಪದವಿ ಕೋರ್ಸ್‌ಗಳಿಗೆ ಸಿ.ಬಿ.ಸಿ.ಎಸ್. ವಿನಿಯಮವನ್ನು ಅನುಷ್ಠಾನಗೊಳಿಸುವ ಸಂಬಂಧ ರಚಿಸಲಾಗಿರುವ ಸಮಿತಿಯ ಸಭೆಯನ್ನು ದಿನಾಂಕ 06.12.2019ರ ಮಧ್ಯಾಹ್ನ 3:00 ಗಂಟೆಗೆ ವಿಶ್ವವಿದ್ಯಾನಿಲಯದ ಶೈಕ್ಷಣಿಕ ವಿಭಾಗದಲ್ಲಿ ಏರ್ಪಡಿಸಲಾಗಿತ್ತು. ಸಭೆಗೆ ಹಾಜರಾಗಿದ್ದ ಎಲ್ಲಾ ಸದಸ್ಯರುಗಳನ್ನು ಸಮಿತಿಯ ಅಧ್ಯಕ್ಷರಾದ ಪ್ರೊ. ಬಿ.ಟಿ. ಸಂಪತ್‌ಕುಮಾರ್ ರವರು ಸ್ವಾಗತಿಸಿದರು. ಅಧ್ಯಕ್ಷರು ದಿನಾಂಕ 20.11.2019 ರಂದು ಕುಲಸಚಿವರು ನೀಡಿರುವ ಪತ್ರವನ್ನು ಸಭೆಯ ಗಮನಕ್ಕೆ ತರುತ್ತಾ, ಪ್ರಸ್ತುತವಿರುವ ಸ್ನಾತಕ ಕೋರ್ಸ್‌ಗಳ ಸಿ.ಬಿ.ಸಿ.ಎಸ್. ವಿನಿಯಮ ಅಳವಡಿಸಿ ನಾಲ್ಕು ವರ್ಷಗಳಾಗಿದ್ದು, ಪಠ್ಯಕ್ರಮ ಪರಿಷ್ಕರಣೆ ಅವಶ್ಯಕವಿರುವುದರಿಂದ ಪಠ್ಯಕ್ರಮಗಳನ್ನು ಪರಿಷ್ಕರಿಸುವ ಮೊದಲು ಸದರಿ ವಿನಿಯಮದಲ್ಲಿ ಏನಾದರೂ ಲೋಪದೋಷ/ಸೇರ್ಪಡೆ/ತಿದ್ದುಪಡಿ/ಬದಲಾವಣೆ ಮಾಡುವ ಅವಶ್ಯವಿದ್ದಲ್ಲಿ, ಸಮಿತಿಯ ಸಭೆ ಕರೆದು ಈ ಬಗ್ಗೆ ಚರ್ಚಿಸಿ ಅಭಿಪ್ರಾಯ ನೀಡುವಂತೆ ಕುಲಸಚಿವರು ತಮ್ಮ ಪತ್ರದಲ್ಲಿ ನಿರ್ದೇಶಿಸಿರುವ ಬಗ್ಗೆ ಸಭೆಗೆ ತಿಳಿಸಿದರು.

ಸಭೆಯು ಪ್ರಸ್ತುತವಿರುವ ಸಿ.ಬಿ.ಸಿ.ಎಸ್. ವಿನಿಯಮದ ತಿದ್ದುಪಡಿಗೆ ಸಂಬಂಧಿಸಿದಂತೆ, ಈ ಕೆಳಕಂಡ ಎರಡು ವಿಚಾರದ ಬಗ್ಗೆ ಚರ್ಚಿಸಲಾಯಿತು.

1. ಈಗಾಗಲೇ ಕೆಲವು ಕಾಲೇಜುಗಳಿಂದ ಪ್ರಸ್ತುತವಿರುವ ಕಡ್ಡಾಯ ಪತ್ರಿಕೆಗಳ ಕೋರ್ಸ್ ಮ್ಯಾಟ್ರಿಕ್ಸ್ ಹಾಗೂ ಸ್ಟ್ರಕ್ಚರ್‌ಗಳನ್ನು ಈ ಕೆಳಕಂಡಂತೆ ಮಾರ್ಪಾಡು ಮಾಡುವಂತೆ ಹಲವು ಬಾರಿ ಮನವಿಗಳು ಸ್ವೀಕೃತವಾಗಿರುತ್ತದೆ.

| Semester | B.Sc. and B.C.A. | B.A. and B.S.W. | B.Com. and B.B.M. |
|---|---|---|---|
| First | Computer Fundamentals | Environmental Science | Indian Constitution |
| Second | Environmental Science | Indian Constitution | Computer Fundamentals |
| Third | Indian Constitution | Computer Fundamentals | Environmental Science |
| Fourth | Open Elective | Open Elective | Open Elective |

ಈ ಬಗ್ಗೆ ಈಗಾಗಲೇ ಎಲ್ಲಾ ಕಾಲೇಜುಗಳಿಗೆ ಸುತ್ತೋಲೆ ಹೊರಡಿಸಿ, ಪ್ರಾಂಶುಪಾಲರುಗಳ ಅಭಿಪ್ರಾಯ ಕೋರಲಾಗಿತ್ತು. ಆದರೆ ಕೆಲವೇ ಕೆಲವು ಕಾಲೇಜುಗಳು ಅಭಿಪ್ರಾಯ ನೀಡಿದ್ದು, ಮಿಶ್ರ ಪ್ರತಿಕ್ರಿಯೆ ಬಂದ ಕಾರಣ ಯಾವುದೇ ಬದಲಾವಣೆ ಮಾಡಲು ಈ ಹಿಂದೆ ಸಾಧ್ಯವಾಗಿರುವುದಿಲ್ಲ. ಆದ್ದರಿಂದ ಮತ್ತೊಮ್ಮೆ ಈ ಬಗ್ಗೆ ಎಲ್ಲಾ ಕಾಲೇಜುಗಳಿಗೆ ಸುತ್ತೋಲೆ ಹೊರಡಿಸಿ, ಕಡ್ಡಾಯವಾಗಿ ಅಭಿಪ್ರಾಯ ನೀಡುವಂತೆ ಪ್ರಾಂಶುಪಾಲರಿಗೆ ತಿಳಿಸಬಹುದಾಗಿದೆ ಎಂದು ಸಭೆಯು ಒಮ್ಮತದಿಂದ ನಿರ್ಧರಿಸಿತು.

2. ತುಮಕೂರು ವಿಶ್ವವಿದ್ಯಾನಿಲಯದ ರಾಜ್ಯಶಾಸ್ತ್ರ ಅಧ್ಯಾಪಕರ ಅಕಾಡೆಮಿ, ಇವರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುವ ದಿನಾಂಕ 06.11.2019ರ ಮನವಿಯನ್ನು ಪರಿಶೀಲಿಸಲಾಯಿತು. ಸದರಿ ಮನವಿಯಲ್ಲಿ ಕಡ್ಡಾಯ ಪತ್ರಿಕೆಯಾದ ಭಾರತ ಸಂವಿಧಾನದ ಕಾರ್ಯಭಾರವನ್ನು ಎರಡು ಗಂಟೆಯ ಬದಲು ನಾಲ್ಕು ಗಂಟೆಗೆ ನಿಗದಿಪಡಿಸುವಂತೆ ಹಾಗೂ ಸದರಿ ವಿಷಯದ ಉತ್ತರ ಪತ್ರಿಕೆಗಳ



Svelustu

ಮೌಲ್ಯಮಾಪನವನ್ನು ಕೇಂದ್ರೀಕೃತಗೊಳಿಸುವ ಬಗ್ಗೆ ಚರ್ಚೆ ನಡೆಸಲಾಯಿತು. ತುಮಕೂರು ವಿಶ್ವವಿದ್ಯಾನಿಲಯದ ಪ್ರಸ್ತುತ ಸಿ.ಬಿ.ಸಿ.ಎಸ್. ವಿನಿಯಮದಲ್ಲಿ ಬಿ.ಎಸ್ಸಿ. ಬಿ.ಸಿ.ಎ. ಹಾಗೂ ಬಿ.ಎಸ್.ಡಬ್ಲ್ಯೂ. ಕೋರ್ಸ್‌ಗಳಿಗೆ ಈಗಾಗಲೇ ವಾರಕ್ಕೆ 34 ರಿಂದ 36 ಗಂಟೆಗೆ ಬೋಧನಾ/ ವ್ಯಾಸಂಗದ ಕಾರ್ಯಭಾರವಿದ್ದು, ಹೆಚ್ಚಿನ ಕಾಲೇಜುಗಳಿಗೆ ತರಗತಿ/ಪ್ರಯೋಗಾಲಯದ ಕೊರತೆಯಿಂದಾಗಿ ಪ್ರಸ್ತುತವಿರುವ ಕಾರ್ಯಭಾರಕ್ಕೆ ಬೋಧನೆ ಮಾಡುವುದು ಕಷ್ಟಸಾಧ್ಯವಾಗುತ್ತದೆ ಎಂದು ಕೆಲವು ಸದಸ್ಯರು ಅಭಿಪ್ರಾಯ ನೀಡಿದರು. ಹಾಗೂ ಈಗಾಗಲೇ ವಿದ್ಯಾರ್ಥಿಗಳಿಗೆ ಈ ಹಿಂದಿನ ನಾನ್ ಸಿ.ಬಿ.ಸಿ.ಎಸ್. ಪಠ್ಯಕ್ರಮಕ್ಕೆ ಹೋಲಿಸಿದರೆ ಹೆಚ್ಚು ಕಾರ್ಯಭಾರವಿರುವುದರಿಂದ ಕಡ್ಡಾಯ ಪತ್ರಿಕೆಗಳ ಕಾರ್ಯಭಾರವನ್ನು ಹೆಚ್ಚಿಸಿದ್ದಲ್ಲಿ ವಿದ್ಯಾರ್ಥಿಗಳ ಮೇಲೆ ಇನಷ್ಟು ಹೊರೆ ಬಿದ್ದಂತಾಗುತ್ತದೆ. ಹಾಗೂ ಒಂದು ವೇಳೆ ಭಾರತ ಸಂವಿಧಾನದ ಪತ್ರಿಕೆಯ ಕಾರ್ಯಭಾರವನ್ನು ಎರಡರಿಂದ ನಾಲ್ಕು ಗಂಟೆಗೆ ಹೆಚ್ಚಿಸಿದರೆ ಎಲ್ಲಾ ಸೆಮಿಸ್ಟರ್‌ಗಳ ಕ್ರೆಡಿಟ್‌ಗಳಲ್ಲಿ ಸಮಾನತೆ ತರಲು ಇನ್ನುಳಿದ ಕಡ್ಡಾಯ/ ಮುಕ್ತ ಆಯ್ಕೆ ಪತ್ರಿಕೆಗಳ ಕಾರ್ಯಭಾರವನ್ನು ಅದೇ ರೀತಿ ಹೆಚ್ಚಿಸಬೇಕಾಗುವ ಸಂದರ್ಭ ಉಂಟಾಗುತ್ತದೆ. ಈ ಅಂಶಗಳ ಬಗ್ಗೆ ಸುಧೀರ್ಘವಾಗಿ ಚರ್ಚಿಸಿದ ಸಭೆಯು ಎಲ್ಲಾ ಕಡ್ಡಾಯ ಪತ್ರಿಕೆ ಹಾಗೂ ಮುಕ್ತ ಆಯ್ಕೆ ಪತ್ರಿಕೆಗಳ ಕಾರ್ಯಭಾರವನ್ನು ಎರಡು ಗಂಟೆಗಳಿಂದ ನಾಲ್ಕು ಗಂಟೆಗೆ ಹೆಚ್ಚಿಸುವ ಬಗ್ಗೆ ಎಲ್ಲಾ ಕಾಲೇಜಿನ ಪ್ರಾಂಶುಪಾಲರುಗಳಿಂದ ಸುತ್ತೋಲೆ ಹೊರಡಿಸುವ ಮೂಲಕ ಅಭಿಪ್ರಾಯ ಪಡೆಯಬಹುದಾಗಿದೆಯೆಂದು ಸಭೆಯು ತೀರ್ಮಾನಿಸಿತು.

ಮೇಲ್ಕಂಡ ಎರಡು ವಿಷಯಗಳ ಬಗ್ಗೆ ಎಲ್ಲಾ ಕಾಲೇಜುಗಳಿಂದ ಅಭಿಪ್ರಾಯ ಪಡೆದ ನಂತರ ಎಲ್ಲಾ ಅಭಿಪ್ರಾಯಗಳನ್ನು ಕ್ರೋಢೀಕರಿಸಿ, ಸಿ.ಬಿ.ಸಿ.ಎಸ್. ವಿನಿಯಮದಲ್ಲಿ ಬದಲಾವಣೆಯ ಅವಶ್ಯಕತೆಯ ಬಗ್ಗೆ ಮತ್ತೊಂದು ಸಭೆ ನಡೆಸಿ ಚರ್ಚಿಸಬಹುದಾಗಿದೆ ಎಂದು ತೀರ್ಮಾನಿಸಲಾಯಿತು. ಸಂಚಾಲಕರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

| ಕ್ರಮ ಸಂಖ್ಯೆ | ಅಧ್ಯಕ್ಷರು / ಸದಸ್ಯರುಗಳು | ಸಹಿ |
|---|---|---|
| 1 | ಪ್ರೊ. ಬಿ.ಟಿ. ಸಂಪತ್‌ಕುಮಾರ್ – ಅಧ್ಯಕ್ಷರು | |
| 2 | ಪ್ರೊ. ಜಿ. ಸುದರ್ಶನ್‌ರೆಡ್ಡಿ – ಸದಸ್ಯರು | |
| 3 | ಪ್ರೊ. ಪಾಟೀಲ್ ಮಲ್ಲಿಕಾರ್ಜುನ ಬಿ. – ಸದಸ್ಯರು | |
| 4. | ಪ್ರೊ. ಬಸವರಾಜ ಜಿ. – ಸದಸ್ಯರು | |
| 5 | ಶ್ರೀ ಟಿ.ಎನ್. ಹರಿಪ್ರಸಾದ್ – ಸದಸ್ಯರು | |
| 6 | ಪ್ರಾಂಶುಪಾಲರು, ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ತುಮಕೂರು – ಸದಸ್ಯರು | |
| 7 | ಅಧ್ಯಕ್ಷರು, ತುಮಕೂರು ವಿಶ್ವವಿದ್ಯಾನಿಲಯದ ಕಾಲೇಜು ಅಧ್ಯಾಪಕರುಗಳ ಸಂಘ – ಸದಸ್ಯರು | Absent |
| 8 | ಉಪಕುಲಸಚಿವರು, ಶೈಕ್ಷಣಿಕ ವಿಭಾಗ – ಸಂಚಾಲಕರು | |